ಎಲ್ಲಿ ಆಗುತ್ತದೆ. ಕನಿಷ್ಟ ಒಂದು ಲಕ್ಷ ರೂಪಾಯಿಯಾದರೂ ಕೊಡಬೇಕು. ದುಡಿಯುವಂತಹ ಇಬ್ಬರೂ ಮಕ್ಕಳು ಪ್ರಾಣ ಕಳೆದುಕೊಂಡಿದ್ದಾರೆ. ನೀವು ಅವರಿಗೆ ಒಂದೊಂದು ಲಕ್ಷ ಕೊಡದೇ ಬರೀ 20–20 ಸಾವಿರ ಕೊಟ್ಟರೆ ಅದು ಭಿಕ್ಷೆ ಬೇಡಿದ ಹಾಗೆ ಆಯಿತು. ದಯಮಾಡಿ ಇದನ್ನು ಒಂದು ಲಕ್ಷ ರೂಪಾಯಿ ಮಾಡಬೇಕು ಎಂದು ಹೇಳುತ್ತೇನೆ. ಈ ಎನ್‌ಕ್ವಯರಿ ಮಾಡಿರುವುದು ಸರಿ ಇಲ್ಲ ಎಂದು ನನಗೆ ಕಾಣುತ್ತದೆ. ಅದರಲ್ಲೂ ಕೊಟ್ಟೂರು ಆಗಾಗ್ಗೆ ಫೇಸ್ ಮಾಡುತ್ತಾ ಇರತಕ್ಕಂತಹ ಪ್ರಾಬ್ಲಮ್ ಇದು. ಅದನ್ನು ಕ್ಲೋಸ್ ಮಾಡಬೇಕಾದರೆ ಸರಿಯಾದ ತನಿಖೆಯಾಗಬೇಕು ಎಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಮುಖ್ಯಮಂತ್ರಿಗಳ ಪರವಾಗಿ):– ಮಾನ್ಯ ಅಧ್ಯಕ್ಷರೆ ಇದು ಮ್ಯಾಜಿಸ್ಟೀರಿಯಲ್ ಎನ್‌ಕ್ವಾಯರಿ ಆಗಿದೆ, ಅದು ಸರಿಯಾದ ರೀತಿಯಲ್ಲಿ, ಆಗಿದೆಯೆಂದು ಸರ್ಕಾರದ ಅಭಿಪ್ರಾಯ. ಎರಡನೆಯದು ಮಾನ್ಯ ಸದಸ್ಯರು 20 ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದಾರೆ ಅದು ಸಾಲದೆಂದು ಹೇಳಿದ್ದಾರೆ. ಅವರ ಅನಿಸಿಕೆ ನಿಜವಿರಬಹದು. ಆದರೆ ಈಗಿನ ನಿಯಮಗಳ ಪ್ರಕಾರ ಈ ತರಹ ಆಘಾತಗಳಿಗೆ ಯಾವ ಪರಿಹಾರ ಕೊಡುವ ನಿಯಮಗಳು ಇಲ್ಲ. ಆದರೆ ವಿಶೇಷವಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತೆಗೆದು ಅನುಕಂಪದ ಆಧಾರದ ಮೇಲೆ 20–20 ಸಾವಿರ ಕೊಡಲಾಗಿದೆ. ಅದನ್ನು ಪೆಚ್ಚಿಸತಕ್ಕ ಅಭಿಪ್ರಾಯ ಸಧ್ಯಕ್ಕೆ ಸರ್ಕಾರದಲ್ಲಿ ಇಲ್ಲ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು:– ಮಾನ್ಯ ಅಧ್ಯಕ್ಷರೆ, ಅನುಕಂಪದಿಂದ ಕೊಡುವ ಹಣವನ್ನು 20 ಸಾವಿರಕ್ಕೆ ನಿಲ್ಲಿಸಬೇಡಿ. ಅನುಕಂಪದ ಆಧಾರದ ಮೇಲೆ ಕೊಡುವುದನ್ನು 1 ಲಕ್ಷ ಮಾಡಿ. 20 ಸಾವಿರ ಕೊಟ್ಟರೆ ಏನೂ ಆಗುವುದಿಲ್ಲ. ದುಡಿಯುವ ಮಕ್ಕಳನ್ನು ಕಳೆದುಕೊಂಡಿದ್ದಾರೆ. ಆ ಸಂಸಾರದಲ್ಲಿ ದುಡಿಯುವ ಮಕ್ಕಳು ಯಾರೂ ಇಲ್ಲ. 1 ಲಕ್ಷವಾದರೂ ಮಾಡಿ. ಅದಕ್ಕೆ ಬೇರೆ ಫಂಡ್ ಇಲ್ಲದಿದ್ದರೆ ಮುಖ್ಯಮಂತ್ರಿಗಳ ಫಂಡ್‌ನಿಂದ ಕೊಡಿಸಿ ಪರವಾಗಿಲ್ಲ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:– ಸಧ್ಯದ ನಿಮಯಗಳಲ್ಲಿ ಅವಕಾಶವಿಲ್ಲ. ನಿಯಮಗಳು ಬದಲಾವಣೆಯಾದರೆ ಪರಿಶೀಲಿಸಬಹುದು.

ಬೆಳಗಾವಿ ತಾಲ್ಲೂಕಿನ ಕೆದನೂರು ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಪರಿವರ್ತನೆ.

184 (1217): ಶ್ರೀ ಕೆ.ಸಿ. ಮಾಡಗೇಕರ್ ದೇಸಾಯಿ (ಹೀರೇಬಾಗೇವಾಡಿ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾಂ ತಾಲ್ಲೂಕಿನ ಕೆದನೂರು ಗ್ರಾಮದ ಪ್ರಾಕೃತಿಕ ಸೌಂದರ್ಯವನ್ನು ಸರ್ಕಾರ ಗಮನಿಸಿದೆಯೇ ?

ಆ. ಹಾಗಿದ್ದಲ್ಲಿ, ಆ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಘೋಷಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು ?

ಶ್ರೀ ಸೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಹೌದು.

ಆ. ಕೆದನೂರು ಗ್ರಾಮ ಕರ್ನಾಟಕ ಪ್ರವಾಸೋದ್ಯಮ ನೀತಿಯ ರೀತ್ಯ 'ಬಿ' ಗುಂಪಿನಡಿ ಬರುತ್ತದೆ. ಈ ಸ್ಥಳದಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳು ಬಂಡವಾಳ ಹೂಡಿಕೆ ಮೇಲೆ ಶೇಕಡ 20 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡುವುದು.

Sri K.C. Modagekar Desai:– Speaker Sir, the Government has agreed to give 20% as Investment Subsidy apart from incentives and concessions to Private Entrepreneur. Will the Government increase the investment subsidy to 40% atleast, instead of 20%?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಮಾನ್ಯ ಸಭಾಧ್ಯಕ್ಷರೆ, ಸಬ್ಸಿಡಿ ವಿಚಾರ, ಇದು ರಾಜ್ಯದ ಒಂದು ನೀತಿಯಾಗಿದೆ. ಎ, ಬಿ, ಸಿ, ಕ್ಯಾಟಗರಿಯೆಂದು ಮಾಡಿ 'ಬಿ' ಕ್ಯಾಟಗರಿಗೆ 20 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ. ಸಿ ಕ್ಯಾಟಗರಿಗೆ 25 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದೇವೆ. ಆದ್ದರಿಂದ ಒಂದೊಂದು ಸ್ಥಳಕ್ಕೆ ಸಬ್ಸಿಡಿ ಕೊಡುವ ವಿಚಾರದಲ್ಲಿ ಬೇರೆ ಬೇರೆ ತರಹ ಕೊಡುವುದಕ್ಕೆ ಬರುವುದಿಲ್ಲ. ಸಬ್ಸಿಡಿಗೆ ಖಾಸಗಿಯವರು ಯಾರಾದರೂ ಮುಂದೆ ಬಂದರೆ ಅವರಿಗೆ ಈ ಪ್ರೇಕ್ಷಣೀಯ ಸ್ಥಳಕ್ಕೆ 20 ಪರ್ಸೆಂಟ್ ಕೊಡಲಿಕ್ಕೆ ಸರ್ಕಾರ ಬದ್ಧವಾಗಿದೆ.

Sri K.C. Modagekar Desai:– Sir, since it is a rural area, I am once again requesting the Government through you Sir, to consider to increase the subsidy and make provision during this financial year.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ:– ಸಧ್ಯಕ್ಕೆ ಆದನ್ನು ಮಾಡಲಿಕ್ಕೆ ಬರುವುದಿಲ್ಲ.

ವರಕವಿ ಸರ್ವಜ್ಞ, ಸ್ಮಾರಕ ನಿರ್ಮಾಣ.

185 (1286): ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ವರಕವಿ ಸರ್ವಜ್ಞನ ಜನ್ಮಸ್ಥಳವಾದ ಹಿರೇಕೆರೂರು ತಾಲ್ಲೂಕು ಆಬಲೂರು ಗ್ರಾಮದಲ್ಲಿ ಸರ್ವಜ್ಞನ ಸ್ಮಾರಕ ಹಾಗೂ ಸುವ್ಯವಸ್ಥಿತವಾದ ಸಂಪರ್ಕ ರಸ್ತೆ, ಪ್ರವಾಸಿ ಮಂದಿರ ಇಲ್ಲದೇ ಇರುವುದನ್ನು ಸರ್ಕಾರ ಗಮನಿಸಿದೆಯೇ ?

ಆ. ಆಬಲೂರಿನಲ್ಲಿ ಸರ್ವಜ್ಞ ಸ್ಮಾರಕ, ಪ್ರವಾಸಿ ಮಂದಿರ, ಸ್ಮಾರಕ ಭವನ, ನಗ್ಗೆರೆ ನಿರ್ಮಿಸಲು ಸರ್ಕಾರ ಯೋಜಿಸಿದೆಯೇ ? ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ನೀತಿ ಹಾಗೂ ಕಾರ್ಯಕ್ರಮವೇನು ?

ಇ. ಈ ಗ್ರಾಮವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡಲು ಸರ್ಕಾರ ಉದ್ದೇಶಿಸಿದೆಯೇ ? ಈ ಬಗ್ಗೆ ಹಾಕಿಕೊಂಡ ಯೋಜನೆ ಮತ್ತು ತಗಲುವ ವೆಚ್ಚವೆಷ್ಟು ?

ಈ. ಈ ಗ್ರಾಮಕ್ಕೆ ಯಾವ ಯಾವ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು:

ಉ. ಈ ಪ್ರವಾಸಿ ಕೇಂದ್ರಕ್ಕೆ 1993–94ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಮೊತ್ತ ಎಷ್ಟು ?